# ಕರ್ನಾಟಕ ವಿಧಾನ ಪರಿಷತ್ತು

ಅ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 519
2. ಸದಸ್ಯರ ಹೆಸರು : ಶ್ರೀ ಬಿ.ಜಿ.ಪಾಟೀಲ್
3. ಉತ್ತರಿಸಬೇಕಾದ ದಿನಾಂಕ : 11.12.2025.
4. ಉತ್ತರಿಸುವ ಸಚಿವರು : ಮಾನ್ಯ ಸಣ್ಣ ನೀರಾವರಿ, ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ ಜಿಲ್ಲೆಯ ಆಳಂದ ತಾಲ್ಲೂಕಿನ ನಿಂಬರ್ಗಾದ ಕೆರೆಯ ಅಭಿವೃಧಿಯ ಕಾಮಗಾರಿಗಾಗಿ ಸರ್ಕಾರದಿಂದ ಬಿಡುಗಡೆಯಾದ ಅನುದಾನ ಎಷ್ಟು ಮತ್ತು ಯಾವ ಸಾಲಿನಲ್ಲಿ ಬಿಡುಗಡೆ ಮಾಡಲಾಗಿದೆ; | ಕಲಬುರಗಿ ಜಿಲ್ಲೆಯ ಆಳಂದ ತಾಲ್ಲೂಕಿನ ನಿಂಬರ್ಗಾ ಗ್ರಾಮದ ಹತ್ತಿರ ಹೊಸ ಕೆರೆ ನಿರ್ಮಾಣ ಕಾಮಗಾರಿಯನ್ನು (ಮುಂದುವರೆದ ಕಾಮಗಾರಿ) ರೂ. 254.00 ಲಕ್ಷ ಅಂದಾಜು ಮೊತ್ತದಲ್ಲಿ ಕೈಗೊಳ್ಳಲು ದಿನಾಂಕ:17.03.2020 ರಂದು ಸರ್ಕಾರದಿಂದ ಅನುಮೋದನೆ ನೀಡಲಾಗಿರುತ್ತದೆ. |
| ಆ) | ಸದರಿ ಕೆರೆಯ ಕಾಮಗಾರಿ ಅಪೂರ್ಣಗೊಂಡಿದ್ದು ಕೆರೆಯ ವೇಷ್ಟವೇರ್ ಕಾಮಗಾರಿ ಕಳೆದ 5 ವರ್ಷಗಳಿಂದ ನೆನಗುದಿಗೆ ಬೀಳಲು ಕಾರಣವೇನು: (ವಿವರ ನೀಡುವುದು) | ಸದರಿ ಕಾಮಗಾರಿಯನ್ನು ಶ್ರೀ ಸಂತೋಷ ಎಸ್. ಗುತ್ತೇದಾರ ಇವರಿಗೆ ರೂ. 266.56 ಲಕ್ಷ ಗಳಿಗೆ (ಜಿ.ಎಸ್.ಟಿ. ಸಹಿತ) ವಹಿಸಿಕೊಡಲಾಗಿದ್ದು, ದಿನಾಂಕ:27.09.2021 ರಂದು ಗುರುತು ರೇಖೆ ನೀಡಲಾಗಿರುತ್ತದೆ. ಗುತ್ತಿಗೆ ಕರಾರಿನನ್ವಯ ಈ ಕಾಮಗಾರಿಯನ್ನು 11 ತಿಂಗಳೊಳಗಾಗಿ ಪೂರ್ಣಗೊಳಿಸಬೇಕಾಗಿತ್ತು. |
| ಇ) | ಕೆರೆಯ ಕಾಮಗಾರಿಯನ್ನು ಪೂರ್ಣಗೊಳಿಸಿ ಸುತ್ತ-ಮುತ್ತ ಪ್ರದೇಶದ ರೈತರ ಜಮೀನುಗಳಿಗೆ ನೀರು ಸಮರ್ಪಕವಾಗಿ ಲಭ್ಯವಾಗುವ ನಿಟ್ಟಿನಲ್ಲಿ ಸರ್ಕಾರವು ಕೆರೆಯ ಅಭಿವೃದ್ಧಿಗೆ ಬೇಕಾದಷ್ಟು ಅನುದಾನವನ್ನು ನೀಡಿ ರೈತರ ಬದುಕನ್ನು ಹಸನಾಗಿಸುವುದೇ? (ವಿವರ ನೀಡುವುದು) | ಕೆರೆಯ ಏರಿಯ ಉದ್ದ 450 ಮೀ. ಇರುತ್ತದೆ. ಏರಿಯ ಚೈನೇಜ್ 240 ಮೀ. ದಿಂದ 323.10 ಮೀ. ವರೆಗಿನ ಗಾರ್ಜ್ ಪೋರ್ಷನ್ ಹೊರತುಪಡಿಸಿ ಏರಿ ನಿರ್ಮಾಣ ಕಾಮಗಾರಿ, ರಿವೆಟಮೆಂಟ್, ಕೋಡಿ ನಿರ್ಮಾಣ ಕಾಮಗಾರಿ, ಪೂರ್ಣಗೊಂಡಿರುತ್ತದೆ. ಅಪ್ರೋಚ್ ಮತ್ತು ಕೋಡಿ ಕಾಲುವೆಯ ಅಗೆತದ ಭಾಗಶ: ಕಾಮಗಾರಿಯನ್ನು ನಿರ್ವಹಿಸಲಾಗಿದೆ. ಎಡದಂಡೆ ಕಾಲುವೆಯ ಒಟ್ಟು ಉದ್ದ 180 ಮೀ. ಇದ್ದು, ಲೈನಿಂಗ್ ಕಾಮಗಾರಿ ಪೂರ್ಣಗೊಂಡಿರುತ್ತದೆ. ಬಲದಂಡೆ ಕಾಲುವೆಯ ಒಟ್ಟು ಉದ್ದ 240 ಮೀ. ಇದ್ದು, ಅಗೆತದ ಕಾಮಗಾರಿ ಪೂರ್ಣಗೊಂಡಿರುತ್ತದೆ. ಸದರಿ ಗುತ್ತಿಗೆದಾರರಿಗೆ ರೂ.118.66 ಲಕ್ಷ ಪಾವತಿಸಲಾಗಿದೆ.<br><br>ಸದರಿ ಕೆರೆ ನಿರ್ಮಾಣಕ್ಕಾಗಿ 12 ಎಕರೆ 01 ಗುಂಟೆ ಹೆಚ್ಚುವರಿ ವಿಸ್ತೀರ್ಣ ಭೂಸ್ವಾಧೀನಕ್ಕಾಗಿ ಪ್ರಸ್ತಾವನೆಯನ್ನು ವಿಶೇಷ ಭೂಸ್ವಾಧೀನಾಧಿಕಾರಿಗಳು, ಕಲಬುರಗಿ ರವರಿಗೆ ಸಲ್ಲಿಸಲಾಗಿರುತ್ತದೆ ಹಾಗೂ ದಿನಾಂಕ:02.03.2022 ರಂದು ರೂ.48.10 ಲಕ್ಷ ಮುಂಗಡ ಹಣವನ್ನು ಠೇವಣಿಯಾಗಿಡಲಾಗಿರುತ್ತದೆ. ರೈತರು ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡ ನಂತರ ಕಾಮಗಾರಿಯನ್ನು ನಿರ್ವಹಿಸುವಂತೆ ತಕರಾರು ಮಾಡಿರುವ ಕಾರಣ, ಸದರಿ ಗುತ್ತಿಗೆದಾರರ ಟೆಂಡರನ್ನು ರದ್ದುಪಡಿಸಲಾಗಿರುತ್ತದೆ. ಭೂಸ್ವಾಧೀನ ಪ್ರಕ್ರಿಯೆಯು 19(1) ಹಂತದಲ್ಲಿರುತ್ತದೆ.<br><br>ಮುಂದುವರೆದು, ಸದರಿ ಕೆರೆಯ ಬಾಕಿ ಕಾಮಗಾರಿಯನ್ನು ರೂ.245.00 ಲಕ್ಷ ಅಂದಾಜು ಮೊತ್ತದಲ್ಲಿ ಕೈಗೊಳ್ಳಲು ದಿನಾಂಕ:30.06.2025 ರಂದು ಸರ್ಕಾರದಿಂದ ಅನುಮೋದನೆ ನೀಡಲಾಗಿರುತ್ತದೆ.<br>ಮೇಲೆ ತಿಳಿಸಿರುವಂತೆ, ಸದರಿ ಕೆರೆಯ ಬಾಕಿ ಕಾಮಗಾರಿಗೆ ಈಗಾಗಲೇ ಅನುಮೋದನೆ ನೀಡಲಾಗಿದ್ದು, ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡ ನಂತರ ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮವಹಿಸಲಾಗುವುದು. |

ಕಡತ ಸಂಖ್ಯೆ: MID/124/LCQ/2025

(ಎನ್.ಎಸ್. ಬೋಸರಾಜು)
ಸಣ್ಣ ನೀರಾವರಿ, ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ
ಸಚಿವರು.